ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಲಾಯಿತು.

ಪಾಟೀ ಸವಾಲುಃ ಶ್ರೀ ಎಸ್ ಪಿ ವಕೀಲರಿಂದ

ನಾನು 1983-84 ನೇ ಸಾಲಿನಲ್ಲಿ ದ್ವಿತೀಯ ಪಿ ಯು ಸಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಮದ್ಯಪಾನವನ್ನು 1995 ನೇ ಇಸವಿಯಿಂದ ವ್ಯಾಪಾರ ಮಾಡುತ್ತಿದ್ದೇನೆ. ನಾನು ಪ್ರಶಾಂತ್ ವೈನ್ ಮತ್ತು ಶಿವಾನಿಕ್ಕರ್ ಎಂಬ ಎರಡು ಅಂಗಡಿಗಳ ಮಾಲೀಕ. ನಾನು ಅದಲ್ಲದೆ ರಿಯಲ್ ಎಸ್ಟೇಟ್ ಬಿಸಿನೆಸ್ ಮಾಡುತ್ತೇನೆ. ರಿಯಲ್ ಎಸ್ಟೇಟ್ ಬಿಸಿನೆಸ್ ಅನ್ನು 2010-11 ರಿಂದ ಮಾಡುತ್ತಿದ್ದೇನೆ. ನನ್ನ ಹೆಸರಿನಲ್ಲಿ 04 ಎಕರೆ ಕಾಫಿ ತೋಟ ಇದೆ. ನನ್ನ ವ್ಯವಹಾರದ ಬಗ್ಗೆ ಆದಾಯ ತೆರಿಗೆ ಪಾವತಿ ಮಾಡಿರುತ್ತೇನೆ. ನನ್ನ ಹೆಸರಿನಲ್ಲಿ 3-4 ಬ್ಯಾಂಕ್ ಗಳಲ್ಲಿ ಖಾತೆ ಇದೆ. ಯಾರಿಗಾದರೂ 20 ಸಾವಿರಕ್ಕಿಂತ ಹೆಚ್ಚು ಹಣ ಕೊಡಬೇಕಾದಲ್ಲಿ ಚೆಕ್ ಮುಖಾಂತರ ಕೊಡಬೇಕು ಎಂದರೆ ಸಾಕ್ಷಿದಾರರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಾನು ಪ್ರಸ್ತುತ ಮುನ್ಸಿಪಾಲಿಟಿ ಸದಸ್ಯ ಎಂದರೆ ಸರಿ. ನಾನು ಈ ಹಿಂದೆ ಪುರಸಭಾ ಸದಸ್ಯನಾಗಿ, ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸಿರುತ್ತೇನೆ ಎಂದರೆ ಸರಿ. ನಾನು ಎಲ್ಲಿಂದ ಆದಾಯ ತೆರಿಗೆ ಪಾವತಿ ಮಾಡಿರುತ್ತೇನೆ ಎಂಬ ಬಗ್ಗೆ ದಾಖಲಾತಿ ಹಾಜರುಪಡಿಸಲು ನನಗೇನೂ ತೊಂದರೆ ಇಲ್ಲ. ನಾನು ಆರೋಪಿ ಜೊತೆ 20 ಲಕ್ಷ ವ್ಯವಹಾರ ಮಾಡಿದ ಬಗ್ಗೆ ಆದಾಯ ತೆರಿಗೆಯಲ್ಲಿ ತೋರಿಸಿದ ಬಗ್ಗೆ ನೆನಪಿಲ್ಲ.

ಆರೋಪಿ ನನಗೆ ಕಳೆದ 15 ವರ್ಷಗಳಿಂದ ಪರಿಚಯ. ಆರೋಪಿ ಶ್ರೀನಿಧಿ ಎಂಟರ್ ಪ್ರೈಸಸ್ ಎಲೆಕ್ಟ್ರಿಕಲ್ ಅಂಗಡಿ ಇಟ್ಟುಕೊಂಡಿದ್ದಾರೆ. ಆರೋಪಿ ಆರ್ಥಿಕವಾಗಿ ಚೆನ್ನಾಗಿ ಇದ್ದಾರೆ ಎಂದರೆ ಸರಿ. ದಿಃ 15-02-2020 ರಂದು ಆರೋಪಿ ನನ್ನ ಬಳಿ ಬಂದು 20 ಲಕ್ಷ ಹಣ ಬೇಕೆಂದು ಕೇಳಿರುತ್ತಾರೆ. ನಾನು ಅದೇ ದಿನ ಆರೋಪಿಗೆ ನಾನು 20 ಲಕ್ಷ ಹಣವನ್ನು ನಗದಾಗಿ ನಮ್ಮ ಬಾಳೆಗದ್ದೆ ಮನೆಯಲ್ಲಿ ಕೊಟ್ಟಿರುತ್ತೇನೆ. ಆರೋಪಿ ಜೊತೆ ಇನ್ನೂ ಇಬ್ಬರು ಬಂದಿದ್ದರು ಆದರೆ ಅವರ ಪರಿಚಯ ನನಗೆ ಇಲ್ಲ. ನಾನು ಆರೋಪಿಗೆ ಹಣ ಕೊಟ್ಟಾಗ ಬೆಳಗ್ಗೆ 11 ರಿಂದ 11.30 ಗಂಟೆ ಅಗಿರಬಹುದು. ನಾನು ಹಣ ಕೊಡುವ ಕಾಲಕ್ಕೆ ನಮ್ಮ ಮನೆಯಲ್ಲಿ ನನ್ನ ಹೆಂಡತಿ ಸವಿತರವರು ಹಾಗೂ ಆರೋಪಿ ಜೊತೆ ಬಂದ ಇಬ್ಬರು ವ್ಯಕ್ತಿಗಳು ಇದ್ದರು. ನಂತರ ಆರೋಪಿ ಜೊತೆ ಬಂದ ವ್ಯಕ್ತಿಗಳು ಯಾರು ಎಂದು ತಿಳಿದುಕೊಂಡಿರುವುದಿಲ್ಲ. ನಾನು ಅಂಗಡಿ ವ್ಯಾಪಾರದ ಹಣವನ್ನು ಮನೆಯಲ್ಲಿ ಇಟ್ಟಿದ್ದೆನು ಅದನ್ನೇ ಆರೋಪಿಗೆ

ಕೊಟ್ಟಿರುತ್ತೇನೆ. ಹಣ ಒಂದು ವಾರದ ವ್ಯಾಪಾರದ ಹಣವಾಗಿತ್ತು ಅದರ ಬಗ್ಗೆ ನಾನು ಯಾವುದೇ ಬರವಣಿಗೆ ಇಟ್ಟುಕೊಂಡಿರುವುದಿಲ್ಲ. ನಾನು ಆರೋಪಿಗೆ 500 ಮುಖಬೆಲೆಯ ಹಣ ಕೊಟ್ಟಿರುತ್ತೇನೆ. ನಾನು ಆರೋಪಿಗೆ ಹಣ ಕೊಟ್ಟ ಬಗ್ಗೆ ಯಾವುದೇ ಬರವಣಿಗೆ ಆಗಿರುವುದಿಲ್ಲ ಅದರೆ ಆರೋಪಿ ನನಗೆ ನಿಪಿ-1 ಚೆಕ್ಕನ್ನು ಹಣದ ಮರುಪಾವತಿಗಾಗಿ ಕೊಟ್ಟಿರುತ್ತಾರೆ. ಚೆಕ್ಕನ್ನು ಆರೋಪಿ ಜೊತೆ ಬಂದವರು ಬರೆದಿರುತ್ತಾರೆ, ಆರೋಪಿ ನನಗೆ ಸಹಿ ಮಾಡಿ ಕೊಟ್ಟಿರುತ್ತಾರೆ. ಆರೋಪಿ ನನಗೆ ದಿಃ 18-03-2020 ರ ಚೆಕ್ಕನ್ನು ಕೊಟ್ಟು ನಗದೀಕರಣ ಮಾಡಿಕೊಳಳಲು ಹೇಳಿದ್ದು ಆದರೆ ಆ ದಿನ ಆರೋಪಿಯು ಸ್ವಲ್ಪ ದಿನದ ನಂತರ ಹಣ ವ್ಯವಸ್ಥೆ ಮಾಡುತ್ತೇನೆ ನಂತರದಲ್ಲಿ ಬ್ಯಾಂಕ್ ಗೆ ನಗದೀಕರಣಕ್ಕೆ ಸಲ್ಲಿಸಲು ಹೇಳಿದ ಕಾರಣ ನಾನು ಜೂನ್ 2020 ರಂದು ಬ್ಯಾಂಕ್ ಗೆ ನಿಪಿ-1 ಚೆಕ್ಕನ್ನು ನಗದೀಕರಣಕ್ಕೆ ಸಲ್ಲಿಸಿದ್ದು ದಿಃ 05-06-2020 ರಂದು ಚೆಕ್ಕು ಅಮಾನ್ಯಗೊಂಡು ವಾಪಸ್ಸು ಬಂದಿರುತ್ತದೆ.

ದಿಃ 24-03-2020 ರಿಂದ ಜೂನ್ 01-06-2020 ರವರೆಗೆ ದೇಶಾದ್ಯಂತ ಕೋವಿಡ್ -19 ಪೆಂಡಮಿಕ್ ಕಾರಣ ನ್ಯಾಯಾಲಯ, ಬ್ಯಾಂಕ್ ಮತ್ತು ಇತರ ಎಲ್ಲ ವ್ಯವಹಾರಗಳನ್ನು ಸ್ಥಗಿತ ಮಾಡಿದ್ದರು ಎಂದರೆ ಸರಿ. ನಮ್ಮ ಮಧ್ಯಪಾನದ ಅಂಗಡಿ ಜೂನ್ 2020 ರ ನಂತರ ತೆಗೆಯಲು ಅನುಮತಿ ಕೊಟ್ಟಿತ್ತು ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು)

ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೆ ಕೇ ಸ ಇ

ಜೆ ಎಂ ಎಫ್ ಸಿ, ಸಕಲೇಶಪುರ